ಬೀದರ್ ಜಿಲ್ಲೆಯ ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ

೨೫೮. (ಬಿ) ಡಾ. ವಿಜಯಕುಮಾರ್ ಖಂಡ್ರೆ (ಭಾಲ್ಕಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಬೀದರ್ ಜಿಲ್ಲೆಯ ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆಯು ಯಾವ ಹಂತದಲ್ಲಿದೆ, ಮತ್ತು ಸದರಿ ಕಾರ್ಖಾನೆಯ ಪರವಾನಗಿ ಅವಧಿಯು ಶೀಘ್ರದಲ್ಲಿಯೇ ಮುಗಿಯುವುದರಲ್ಲಿರುವುದರಿಂದ ಅದರ ಸ್ಥಾಪನೆಗಾಗಿ ಸಂಬಂಧಪಟ್ಟವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಸಚಿವರು).—

ಕಾರ್ಖಾನೆಯನ್ನು ಸ್ಥಾಪಿಸುವ ನಿವೇಶನವನ್ನು ಬೀದರ್ ಜಿಲ್ಲೆಯ ಚಿಲ್ಲರಗಿಯಿಂದ ಇಮಾಮ್‌ಪುರಕ್ಕೆ ಬದಲಾಯಿಸಲಾಗಿದ್ದು ಇದಕ್ಕಾಗಿ ಭಾರತ ಸರ್ಕಾರವು ಇನ್ನೂ ಅನುಮತಿ ನೀಡ ಬೇಕಾಗಿದೆ. ರಾಜ್ಯ ಸರ್ಕಾರವು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಹಾಗೂ ಈ ವಿಷಯದ ಬಗ್ಗೆ ಭಾರತ ಸರ್ಕಾರದೊಡನೆ ವ್ಯವಹರಿಸುತ್ತಿದೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಮನವಿಗಳು

ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಅನೇಕ ಗಮನ ಸೆಳೆಯುವ ಸೂಚನೆ ಗಳನ್ನು ಕಳುಹಿಸಿದ್ದೇನೆ. ಆದರಲ್ಲಿ ಮುಖ್ಯವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಸರ್ಕಾರ ಮುಂದೂಡಿರುವ ನಿರ್ಧಾರ ಕೈಗೊಂಡಿದ್ದು ಪರಿಣಾಮಕಾರಿಯಾದುದಲ್ಲ. ಹೀಗೆ ಬೇಜವಾಬ್ದಾರಿ ಯಿಂದ ಚುನಾವಣೆಯನ್ನು ಪದೇ ಪದೇ ಮುಂದಕ್ಕೆ ಹಾಕತಕ್ಕದ್ದು ಸರಿಯಲ್ಲ. ಸರ್ಕಾರ ಯಾವಾಗ ಚುನಾವಣೆ ಮಾಡುತ್ತದೆನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು. ಚುನಾವಣೆಯನ್ನು ಪುನ: ಮುಂದೂಡಲಾಗುತ್ತದೆನ್ನುವ ಮಾತು ಹೊರಗಡೆ ಕೇಳಿಬರುತ್ತಿದೆ, ಏಪ್ರಿಲ್ ೨೯ನೇ ತಾರೀಖು ಚುನಾವಣೆಯನ್ನು ಮಾಡುತ್ತೇವೆಂದು ಇಲ್ಲಿ ಹೇಳುತ್ತಾರೆ. ಯಾವಾಗ ಚುನಾವಣೆಯನ್ನು ಮಾಡುತ್ತಾರೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಇದು ಅತ್ಯಂತ ಗಂಭೀರವಾದ ಪ್ರಶ್ನೆ. ರಾಜ್ಯದಲ್ಲಿ ಅನೇಕ ಜನ ಚುನಾವಣೆಗೆ ನಿಂತಿದ್ದಾರೆ. ಚುನಾವಣೆ ಮುಂದಕ್ಕೆ ಹೋದರೆ ಅವರ ಪರಿಸ್ಥಿತಿ ಏನು ? ನಾಮಕರಣ ಗೊಂಡಿರುವವರು ಎಷ್ಟು ದಿವಸ ಪ್ರಚಾರ ಮಾಡಬೇಕು ? ಪ್ರಚಾರ ಮಾಡುವ ಸಲುವಾಗಿ ಅವರು ಹಿಂಬಾಲಕರನ್ನು ಇಟ್ಟುಕೊಂಡರೆ ಎಷ್ಟು ಹಣ ವ್ಯಯವಾಗುತ್ತದೆ ಎಂಬುದನ್ನು ಯೋಚನೆ ಮಾಡ ಬೇಕು. ಪ್ರಚಾರಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದು ನಿಮಗೆ ಗೊತ್ತಿದೆಯೆ ? ಆದ್ದರಿಂದ ಇಂತಹ ದಿವಸ ಚುನಾವಣೆಯನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ಇದು ಗಂಭೀರವಾದ ಪ್ರಶ್ನೆ. ಹೀಗೆ ಚುನಾವಣೆಯನ್ನು ಮುಂದೂಡತಕ್ಕದ್ದು ಸರಿಯಾದುದಲ್ಲ. ತಾವು ಯಾವಾಗ ಚುನಾವಣೆ ನಡೆಸುತ್ತೀರಿ ಎಂಬುದನ್ನು ಹೇಳಬೇಕು. ಯಾವಾಗ ಬೇಕಾದರೂ ನಡೆಸುತ್ತೇವೆಂದು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್,—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಮುನಿಸಿಪಾಲಿಟಿ ಚುನಾವಣೆಯ ಬಗ್ಗೆ ಕೇಳುತ್ತಿದ್ದಾರೆಂದು ಕಾಣುತ್ತದೆ. ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಚುನಾವಣೆಗಳನ್ನು ಎರಡು ಸಾರಿ ಮುಂದೂಡಿದ್ದು ನಿಜ. ಆದರ ಬಗ್ಗೆ ಈಗಾಗಲೇ ಹೇಳಿದ್ದೇವೆ. ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳಿಗೆ ಏಪ್ರಿಲ್ ೨೯ರಂದು ಮತದಾನ ನಡೆಯುತ್ತದೆ. ನಾವು ಪೋಲಿಂಗ್ ಡೇಟ್ ಮಾತ್ರ ಮುಂದೂಡಿದ್ದೇವೆ. ಪೋಲಿಂಗ್ ಏಪ್ರಿಲ್ ೨೯ಕ್ಕೆ ನಡೆಯುತ್ತದೆ. ಪೋಲಿಂಗ್ ಡೇಟ್ ಪೋಸ್ಟ್‌ಪೋನ್ ಮಾಡುವುದಕ್ಕೆ ಅನೇಕ ಕಾರಣ ಗಳಿತ್ತು. ಆದ್ದರಿಂದ ಅದನ್ನು ಮುಂದೂಡಿದ್ದೇವೆ. ಏಪ್ರಿಲ್ ೨೯, ೧೯೯೦ರಂದು ಮತದಾನವಾಗುತ್ತದೆ, ಇದು ಸರ್ಕಾರದ ಸ್ಪಷ್ಟ ನಿಲುವು, ಇದರಲ್ಲಿ ಯಾವುದೇ ತರಹದ ಬದಲಾವಣೆ ಇಲ್ಲ.

ಶ್ರೀ ಬಿ ಎಸ್. ಯಡಿಯೂರಪ್ಪ.—ರೂಲ್ಸ್ ಪ್ರಕಾರ, ಕ್ಯಾಲೆಂಡರ್ ಆಫ್ ಇವೆಂಟ್ಸ್‌ನಲ್ಲಿ ೯೦ ದಿವಸಗಳ ಒಳಗೆ ಚುನಾವಣೆ ನಡೆಯಬೇಕೆಂದು ಇದೆ. ೯೦ ದಿವಸಗಳ ಒಳಗೆ ಚುನಾವಣೆ ನಡೆಯದೇ ಹೋದರೆ, ಕೋರ್ಟಿಗೆ ಹೋಗಿ ಸ್ಟೇ ತರುವ ಅವಕಾಶ ಇದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಆಗ ಚುನಾವಣೆಗಳ ಬಗ್ಗೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಕಷ್ಟ ಏನು ಬಂತು ಎಂದರೆ ಮುನಿಸಿಪಾಲಿಟಿಗಳಲ್ಲಿ ಚುನಾವಣೆ ಮುಂದೂಡುವುದಕ್ಕೆ ಅವಕಾಶ ಇತ್ತು. ಆದರೆ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕ್‌ಪರೇಷನ್‌ಗಳಲ್ಲಿ ಚುನಾವಣೆಗಳನ್ನು ಕ್ಯಾನ್ಸಲ್ ಮಾಡುವುದಕ್ಕೆ ಇಲ್ಲವೇ ಚುನಾವಣೆ ಮುಂದೂಡುವುದಕ್ಕೆ ಅವಕಾಶ ಇರಲಿಲ್ಲ. ಇದರ ಸಲುವಾಗಿ ಸುಗ್ರೀವಾಜ್ಞೆಯನ್ನು ತಂದಿದ್ದೇವೆ. ಚುನಾವಣೆ ಮುಂದೂಡುವುದಕ್ಕೆ ಅವಕಾಶ ಇಲ್ಲದಿದ್ದುದಕ್ಕೆ ಈ ಸುಗ್ರೀವಾಜ್ಞೆಯನ್ನು ಹೊರಡಿಸಿಬಿಟ್ಟಿದ್ದೇವೆ. ಅದಕ್ಕೆ ಮೊದಲು ಯಾವ ತಾರೀಖಿನ್ನು ನಿಗದಿ ಮಾಡಿದ್ದವು, ಆವಾಗ ಕಾರಣಾಂತರಗಳಿಂದ ಆವತ್ತಿನದಿವಸ ಪೋಲಿಂಗ್ ಆಗುವುದು ಕಷ್ಟವಾಗುತ್ತದೆ ಎನ್ನುವ ಕಾರಣಕ್ಕಾಗಿ ಮುಂದಕ್ಕೆ ಹಾಕಲಾಯಿತು. ಕೆಲವರಿಗೆ ಒಂದು ಕನ್‌ಫ್ಯೂಶನ್ ಏನು ಇತ್ತು ಎಂದರೆ ಎಲ್ಲಾ ಚುನಾವಣೆಗಳನ್ನು ರದ್ದು ಮಾಡಿದ್ದಾರೆಯೇ ಎಂದು. ಆದರೆ ಪೋಲಿಂಗ್ ಡೇಟ್‌ನ್ನು ಮಾತ್ರ ರದ್ದು ಮಾಡಿ ಚುನಾವಣೆಯನ್ನು ಮುಂದೆ ಹಾಕಿದ್ದೇವೆಂದು ಈಗಾಗಲೇ ಸ್ಪಷ್ಟೀಕರಣ ಕೊಟ್ಟಿದ್ದೇವೆ. ಚುನಾವಣೆಯ ಪ್ರೊಸೆಸ್ ಏನು ಸ್ಟಾರ್ಟ್ ಆಗಿತ್ತು, ಅದು ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಅದು ಮುಂದುವರೆಯುತ್ತದೆ. ಮುಂದೆ ಹಾಕಿದ್ದು ಎಂದರೆ ಡೇಟ್ ಆಫ್ ಪೋಲಿಂಗ್ ಮಾತ್ರ, ಮತದಾನದ ತಾರೀಖಿನ್ನು ಮೊದಲು ಏನು ನಿಗದಿ ಮಾಡಿದ್ದೆವು, ಅದನ್ನು ಕ್ಯಾನ್ಸಲ್ ಮಾಡಿ ಮುಂದಿನ ತಾರೀಖಿನ್ನು ನಿಗದಿ ಮಾಡಿದೆವು, ಏಕೆಂದರೆ ಕೆಲವಾರು ಸ್ನೇಹಿತರು ಬಂದು ಹೇಳಿದರು, ಈಗ ನಮಗೆ ಕಷ್ಟ ಇದೆ, ನಮಗೆ ರಂಜಾನ್ ಇದೆ ಎಂದು. ಈ ರೀತಿ ಅನೇಕ ಮನವಿಗಳು ಬಂದಿದ್ದರಿಂದ ಮತ್ತೆ ವಿಚಾರ ಮಾಡಿ ಕೊನೆಗೆ ೨೯ನೇ ಏಪ್ರಿಲ್ ೧೯೯೦ ರಂದು ಚುನಾವಣೆಗಳು ಆಗಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಯಾವ ತರಹದ ಬದಲಾವಣೆಯೂ ಇಲ್ಲ. ೨೯ನೇ ಏಪ್ರಿಲ್ ನಂದು ಮತದಾನ ಆಗುತ್ತದೆ.

ಗಮನ ಸೆಳೆಯುವ ಸೂಚನೆ

ಕೋಲಾರ ಜಿಲ್ಲಾಪರಿಷತ್ತು ಉಪಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದರಿಂದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುದರ ಬಗ್ಗೆ

ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾ ಪರಿಷತ್ತು ೧೪-೩-೯೦ರಂದು ಎಲ್ಲಾ ಉಪ-ಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದರಿಂದ ಒಂದು ಕೋಟಿ ರೂಪಾಯಿಗೂ ಮೀರಿ ವ್ಯಾಪ್ತಿಗತ ಆಗಿರುವುದರಿಂದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುದರ ಬಗ್ಗೆ ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾಪರಿಷತ್ತಿನ ೧೪-೩-೯೦ ರಂದು ನಡೆದ ಉಪ ಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ಉಪಸಮಿತಿಗಳ ನಡವಳಿಕೆಗಳಲ್ಲಿ ಯಾವ ವಿಷಯದ ಮೇಲೆ ತೀರ್ಮಾನ ತೆಗೆದುಕೊಳ್ಳಲಾಗಿತ್ತೋ ಆದರ ಮೇಲೆ ಯೋಜನೆಗಳ ಅನುಷ್ಠಾನ ಕುಂಠಿತವಾಗುವುದರಿಂದ ಅವಲಂಬಿಸಿರುತ್ತದೆ. ಆಯವ್ಯಯದಲ್ಲಿ ಶೇಕಡಾ ೨೫ರಷ್ಟು ಹಣ ಒಂದು ವರ್ಷದಲ್ಲಿ ಉಳಿತಾಯವಾದರೆ ಅದನ್ನು ಮುಂದಿನ ಸಾಲಿಗೆ ತೆಗೆದುಕೊಳ್ಳಬಹುದಾಗಿದೆ. ಅದಕ್ಕೂ ಹೆಚ್ಚಿನ ಹಣ ಉಳಿತಾಯವಾದರೆ ಅದು ಲ್ಯಾಪ್ಸ್ ಆಗುತ್ತದೆ.

†ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈ ಉತ್ತರದ ಬಗ್ಗೆ ಏನು ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಇಲ್ಲಿ ಒಂದೇ ಪದದಲ್ಲಿ ಉಪಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಹೀಗಾದರೆ ನಾನು ಏನು ಪ್ರಶ್ನೆಯನ್ನು ಕೇಳಬೇಕು ? ಇದೇನು ಹೊಸ ಪದ್ಧತಿಯನ್ನು ಹೊಸ ರೀತಿಯನ್ನು ಮಾನ್ಯ ಮಂತ್ರಿಗಳು

†ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.